**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 1906/2023 ಸಿ.ಡಬ್ಲ್ಯೂ –01 ಪಿ.ಡಬ್ಲ್ಯೂ -01

| | | |
|---|---|---|
| ಹೆಸರು | ಃ | ಹಣಮಂತರಾಯ |
| ತಂದೆಃ ಗಂಡ | ಃ | ಬಾಬಾಷಾ |
| ವಯಸ್ಸು | ಃ | ೪೭ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕವಲಗಾ |

ದಿನಾಂಕಃ 25.09.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಚಾಸಾ 2 ರಿಂದ 9 ರವರ ಪರಿಚಯ ಇರುತ್ತದೆ. ಮೃತ ಸರುಬಾಯಿ ನನ್ನ ಹೆಂಡತಿ. ದಿಃ 15-02-2023 ರಲ್ಲಿ ಕಬ್ಬಿನ ಗಾಡಿ ನನ್ನ ಹೆಂಡತಿಯ ಮೇಲೆ ಬಿದ್ದು ಅವರು ತಿರಿಕೊಂಡಿರುತ್ತಾರೆ. ಮೃತ ಸರುಬಾಯಿ ಮತ್ತು ಚಾಸಾ 6 ರವರು ಕಟ್ಟಿಗೆ ತೆಗೆದುಕೊಂಡು ಬರುವಾಗ ರಸ್ತೆಯ ಪಕ್ಕದಲ್ಲಿ ನಿಂತುಕೊಂಡಾಗ ಕಬ್ಬು ತೆಗೆದುಕೊಂಡು ಹೋಗುತ್ತಿದ್ದ ಗಾಡಿಯು ಕಾರ್ನರನಲ್ಲಿ ಅತೀ ವೇಗವಾಗಿ ಬಂದು ಕಟ್ ಹೋಡೆದ ಕಾರಣ ವಾಹನ ಪಲ್ಟಿಯಾಗಿ ನನ್ನ ಹೆಂಡತಿಯ ಮೇಲೆ ಬಿದ್ದಿರುತ್ತದೆ. ಆಗ ನನಗೆ ಚಾಸಾ 7 ರವರು ಕರೆ ಮಾಡಿ ವಿಷಯ ತಿಳಿಸಿರುತ್ತಾರೆ. ನಾನು ಹೋಗಿ ನೋಡಿದಾಗ ಕಬ್ಬಿನ ಗಾಡಿಯು ನನ್ನ ಹೆಂಡತಿಯ ಮೇಲೆ ಬಿದ್ದಿತ್ತು, ಜನರೆಲ್ಲರೂ ಸೇರಿಕೊಂಡು ಜೆ.ಸಿ.ಬಿ ತರಿಸಿ ವಾಹನವನ್ನು ಸರಿಸಿ ನೋಡಿದಾಗ ನನ್ನ ಹೆಂಡತಿಯು ಮೃತರಾಗಿರುತ್ತಾರೆ. ನಂತರ ಪೋಲಿಸ್ ಠಾಣೆಗೆ ಕರೆ ಮಾಡಿ ವಿಷಯ ತಿಳಿಸಿ ನಂತರ ನನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನ್ನ ಹೆಂಡತಿಗೆ ಬಾಯಿಂದ, ಮೂಗಿನಿಂದ ರಕ್ತ ಬಂದಿತ್ತು, ತೊಡೆಯ ಮೇಲೆ ಕಂದು ಗಟ್ಟಿದ ಗಾಯ ಆಗಿತ್ತು. ನಂತರ ಪಂಚನಾಮೆ ಮತ್ತು ಶವ ಪರೀಕ್ಷೆಯನ್ನು ಮಾಡಿರುತ್ತಾರೆ. ನಂತರ ಎರಡು ದಿನಗಳ ಬಳಿಕ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ.

ಸಾಕ್ಷಿಯು ದೂರಿನ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1, ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು).

ಪಾಟೀ ಸವಾಲು : ಮಾನ್ಯ ಸ.ಸ.ಅ ವಕೀಲರಿಂದ

ನನ್ನ ಹೆಂಡತಿ ಮೃತ ಸರುಬಾಯಿ ಮತ್ತು ಚಾಸಾ ೬ ರವರು ಮಧ್ಯಾಹ್ನ ೨.೩೦ ರ ಸುಮಾರಿಗೆ ಕಟ್ಟಿಗೆ ತರಲು ಊರ ಸೀಮೆಗೆ ಹೋಗಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ ೭ ರಿಂದ ೯ ರವರು ಇದ್ದರು ಎಂದರೆ ಸರಿ. ಕಬ್ಬಿನ ಟ್ಯಾಕ್ಟರ ಚಾಲಕನು ಸಾಯಂಕಾಲ ೫.೧೫ ನಿಮಿಷಕ್ಕೆ ಕಬ್ಬು ತುಂಬಿಕೊಂಡು ಬಂದು ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ಟ್ಯಾಕ್ಟರ ಚಲಾಯಿಸಿದ ಕಾರಣ ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದ ನನ್ನ ಹೆಂಡತಿಯ ಮೇಲೆ ಟ್ಯಾಕ್ಟರ ಬಿದ್ದಿರುತ್ತದೆ ಎಂದರೆ ಸರಿ. ನಂತರ ಚಾಸಾ ೬ ರವರನ್ನು ಇತರರು ಸೇರಿಕೊಂಡು ಕಬ್ಬುನ್ನು ಸರಿಸಿ ನೋಡಿದಾಗ ಅವರಿಗೆ ಎದೆಯ ಮೇಲೆ ತರಿಚಿದ, ಮತ್ತು ಕಂದು ಗಟ್ಟಿದ ಗುಪ್ತಗಾಯ, ಎಡಕಿವಿಯ ಹತ್ತಿರ ತರಚಿದ ಗಾಯ ಅಲ್ಲಲ್ಲಿ ತರಿಚಿದ ಗಾಯಗಳು ಆಗಿದ್ದು, ಕಂಡು ಬಂದಿರುತ್ತದೆ ಎಂದರೆ ಸರಿ. ಚಾಸಾ ೬ ರವರನ್ನು, ಚಾಸಾ ೬ ರಿಂದ ೯ ರವರು ಕಲಬುರಗಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಕಬ್ಬಿನ ಗಾಡಿಯ ಚಾಲಕ ಅಪಘಾತಪಡಿಸಿದ ಓಡಿ ಹೋಗಿರುತ್ತಾನೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ನಾನು ೬.೩೦ ಗಂಟೆಗೆ ಅಪಘಾತ ಆದ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಇದ್ದ ಟ್ಯಾಕ್ಟರ ಸಂಖ್ಯೆ ಕೆ ಎ 32/ಡಿ-1204 ಇತ್ತು ಎಂದರೆ ಸರಿ. ದಿಃ 16-02-2023 ರಂದು ಪೋಲಿಪಿಸರು ಸಾಯಂಕಾಲ 4.30 ಗಂಟೆಗೆ ಪಂಚನಾಮೆ ಮಾಡಿ ಸ್ಥಳದಿಂದ ಟ್ಯಾಕ್ಟರ ಸಂಖ್ಯೆ ಕೆ ಎ 32/ಡಿ-1204 ಮತ್ತು ಟ್ರಾಲಿಯನ್ನು ಚಾಸಾ ೪ ಮತ್ತು ೫ ರವರ ಸಮಕ್ಷಮ ಜಪ್ತಿ ಪಡಿಸಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಅದೇ ದಿನ ದಿಃ 16-02-2023 ರಂದು ನನಗೆ ಆಳಂದ ವೃತ ಕಚೇರಿಗೆ ಕರೆಯಿಸಿ ಅಲ್ಲಿ ಇದ್ದ ಆರೋಪಿತರನ್ನು ತೋರಿಸಿ ಅವರ ಹೆಸರು ಮತ್ತು ವಿಳಾಸ ಹೇಳಿ ಅವರೇ ಅಪಘಾತ ಪಡಿಸಿರುತ್ತಾರೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ನಾಯಾಲಯದ ಮುಂದೆ ಇರುವ ವ್ಯಕ್ತಿಗಳೇ ಸದರಿ ಆರೋಪಿತರು ಅಂತಾ ಸಾಕ್ಷಿಯು ಗುರುತಿಸುತ್ತಾರೆ.

ಪಾಟೀ ಸವಾಲು : ಆರೋಪಿತರ ಪರ ಶ್ರೀ. ಡಿ. ಎನ್. ಎಸ್ ವಕೀಲರಿಂದಃ-

ನನಗೆ ೫.೩೦ ಗಂಟೆಗೆ ಕರೆ ಬಂದಿರುತ್ತದೆ. ನನಗೆ ಯಾವ ದೂರವಾಣಿ ಸಂಖ್ಯೆ ಯಿಂದ ಕರೆ ಬಂದಿತ್ತು ಅಂತಾ ಹೇಳಲು ಬರುವುದಿಲ್ಲ. ನಾನು ಇದ್ದ ಜಾಗದಿಂದ ಘಟನಾ ಸ್ಥಳವು ಮೂರುವರೆಯಿಂದ ೪ ಕಿ.ಮೀ ಅಂತರದಲ್ಲಿ ಇರುತ್ತದೆ. ನಾನು ನನ್ನ ಸ್ವಂತ ವಾಹನದಲ್ಲಿ ಬಂದಿರುತ್ತೇನೆ. ಸದರಿ ವಾಹನ ಸಂಖ್ಯೆಯನ್ನು ನಾನು ಅನಕ್ಷರಸ್ಥ ಆದ ಕಾರಣ ಹೇಳಲು ಬರುವುದಿಲ್ಲ. ಭೂಸನೂರದಿಂದ ಕವಲಗಾಗೇ ಬರಲು ೧೦ ರಿಂದ ೧೫ ನಿಮಿಷಗಳು ಬೇಕಾಗುತ್ತದೆ.

೨. ನಿಪಿ. ೧ ರಲ್ಲಿ ಏನು ನಮೂದು ಮಾಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ನನಗೆ ಕೇವಲ ಸಹಿ ಮಾಡಲು ಬರುತ್ತದೆ ಅಂತಾ ನುಡಿಯುತ್ತಾರೆ. ನನಗೆ ಪೋಲಿಸರು ನಿಪಿ. ೧ ರಲ್ಲಿ ಏನು ಬರೆದಿರುತ್ತಾರೆ ಅಂತಾ ಓದಿ ಹೇಳಿರುತ್ತಾರೆ, ಆದರೆ ಅದು ಈಗ ನೆನಪಿಲ್ಲ. ನಿಪಿ. ೧ ರ ಮೇಲೆ ಇರುವ ಸಹಿಯನ್ನು ಯಾವ ದಿನಾಂಕದಂದು ಮತ್ತು ಎಲ್ಲಿ ತೆಗೆದುಕೊಂಡಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ಪೋಲಿಸರು ಪಂಚನಾಮೆ ಮಾಡಲು ಸಾಯಂಕಾಲ ೩.೩೦ ರಿಂದ ೪.೦೦ ರ ಸುಮಾರಿನಲ್ಲಿ ಬಂದಿದ್ದರು. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

೩. ಆರೋಪಿತರಲ್ಲಿ ವಿಕಾಸ ಎನ್ನುವವರು ಚಾಲಕನಿದ್ದು, ಮತ್ತು ರಾಜು ತಂದೆ ಸೇವೋ ರಾಠೋಡ ರವರು ಮಾಲೀಕರು ಇರುತ್ತಾರೆ. ನನಗೆ ಆರೋಪಿತರು ಚಾಲಕ ಮತ್ತು ಮಾಲೀಕ ಅಂತಾ ಮೊದಲಿನಿಂದಲೂ ಗೊತ್ತು ಇತ್ತು. ಯಾವ ಪೋಲಿಸರು ಹೇಳಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿ.

೪. ನನಗೆ ಆರೋಪಿತರು ಎಷ್ಟು ವೇಗದಲ್ಲಿ ಕವಲಗಾ ಕ್ರಾಸ ಹತ್ತಿರ ವಾಹನ ಚಾಲಾಯಿಸುತ್ತಿದ್ದರು ಅಂತಾ ಖುದ್ದಾಗಿ ಗೊತ್ತಿಲ್ಲ, ಆದರೆ ನೋಡಿದ್ದನು ಹೇಳುತ್ತೇನೆ, ನನಗೆ ಸದರಿ ವಿಷಯವನ್ನು ಚಾಸಾ ೭ ರಿಂದ ೯ ರವರು ತಿಳಿಸಿರುತ್ತಾರೆ. ಸದರಿ ರಸ್ತೆಯು ಕಚ್ಚಾ ರಸ್ತೆ ಇತ್ತು. ಸದರಿ ರಸ್ತೆಯು ೧೦ ಫೀಟ್ ಇರುತ್ತದೆ. ಸಾಮಾನ್ಯವಾಗಿ ಕಬ್ಬು ತುಂಬಿದ ವಾಹನಗಳು ವೇಗವಾಗಿ ಚಲಿಸುವುದಿಲ್ಲ ಎಂದರೆ ಸಾಕ್ಷಿಯು ಆರೋಪಿತರು ವೇಗವಾಗಿ ಚಲಿಸಿರುತ್ತಾರೆ. ಅಪಘಾತದಲ್ಲಿ ಆರೋಪಿತರ ತಪ್ಪು ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ಯಾವ ಸಮಯದಲ್ಲಿ ಬಂದು ಪಂಚನಾಮೆ ಮಾಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲದ ಕಾರಣ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ

ಇಲ್ಲ ಎಂದರೆ ಸರಿಯಲ್ಲ. ಅಪಘಾತದ ಪ್ರಕರಣಗಳಲ್ಲಿ ವಿಮೆ ಹಣ ಬರುತ್ತದೆ ಅಂತಾ ನಾನು ಒಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ:**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ